ಅಧಿಕವಾಯಿತು. ಒಂದೊಂದು ಸಿಗರೇಟು ಕೂಡಾ ಹೊಸ ಕಥೆಗಳನ್ನು ಜನ್ನತ್ ಗೆ ಹೇಳಿಕೊಡತೊಡಗಿದವು. ಈ ಮಧ್ಯೆ ಕಥೆಗಳಿಗೆ ಹೊಸ ಹುರುಪು ಕೊಟ್ಟ ಅವಳ ಅನುಪಸ್ಥಿತಿ ಜನ್ನತ್‌ಗೆ ವಿಪರೀತ ಕಾಡತೊಡಗಿತು. ಅವನಿಗೆ ಕಡಲಿನ ಏಕಾಂತದ ಸಂಜೆಗಳು ನೀರಸವೆನಿಸತೊಡಗಿದವು. ಅವಳು ಒಳ್ಳೆಯವಳೋ ಕೆಟ್ಟವಳೋ ಅವಳ ಗುಣವನ್ನು ತೀರ್ಮಾನಿಸುವುದು ನನ್ನ ಕರ್ತವ್ಯವಲ್ಲ. ನಿರೋಧ್ ಬಗ್ಗೆ ಅವಳಿಗೆ ಗೊತ್ತು, ಬಜಾರಿಯಂತೆ ಬೀಡಿ ಸೇದಲೂ ಗೊತ್ತು. ಎಲ್ಲರ ಜೊತೆಗೂ ಮಲಗಿದ ಬಗ್ಗೆ ಮಾತಾಡುತ್ತಾಳೆ ಯಾರೀಕೆ?



ತಲೆ ಪೂರಾ ಚಿಟ್ಟು ಹಿಡಿದಂತಾಗಿ ಅವನು ಸಿಗರೇಟು ಸುಡುತ್ತಾ ಆ ಮುಂಜಾನೆ ನಡೆದುಕೊಂಡೇ ಕಡಲ ದಾರಿಯ ಮುಂದಿನ ಬಸ್ ಸ್ಟಾಂಡ್ ಬಳಿ ಕುಳಿತುಕೊಂಡ. ರಾತ್ರಿಯೆಲ್ಲಾ ಚಡಪಡಿಸಿದ್ದರೂ ಯಾವ ಕಥೆಯೂ ಹೊಳೆದೇ ಇರಲಿಲ್ಲ. ಸುಮ್ಮನೆ ತಲೆ ಕೆರೆದುಕೊಳ್ಳುತ್ತಿದ್ದವನಿಗೆ ಎದುರಿನ ರಸ್ತೆಯಲ್ಲಿ ಅಗ್ನಿಶಾಮಕ ಗಾಡಿಯ ಸೈರನ್ನು ಕೇಳತೊಡಗಿತು. ಅನತಿ ದೂರದ ಕಟ್ಟಡದಲ್ಲಿ ಬೆಂಕಿ, ಪ್ರಶಾಂತ ಆಕಾಶದಲ್ಲೆಲ್ಲಾ ಕಪ್ಪು ಹೊಗೆ ಆವರಿಸಿಕೊಳ್ಳುತ್ತಾ ರುದ್ರ ಭಯಂಕರವಾಗಿ ಆ ಕಟ್ಟಡ ಬೆಂಕಿಗೆ ಆಹುತಿಯಾಗುತ್ತಿತ್ತು. ಜನರ ಹಾಹಾಕಾರ ಸ್ಪಷ್ಟವಾಗಿ ಕೇಳಬಹುದಿತ್ತು. ಜನ್ನತ್ ಬೆಂಕಿ ಬಿದ್ದ ಕಟ್ಟಡದ ಬಳಿಗೆ ಓಡತೊಡಗಿದ. ಹತ್ತಿರವಾದಂತೆ ಅವನೆದೆ ಧಸಕ್ಕೆಂದಿತು. ಅದು ಅದೇ ದೇವಪ್ಪಣ್ಣನ ಸಿಗರೇಟಿನಂಗಡಿ. ಒಂದು ಕ್ಷಣ ಮನಸ್ಸು ಚೀರಿತು. ಅದಾಗಲೇ ಬೆಂಕಿಯು ಅಂಗಡಿಯನ್ನು ಭಾಗಶಃ ಸುಟ್ಟು ಹಾಕಿತ್ತು. ಹೊರಗಡೆ ನಿಂತು ಕಣ್ಣು ಕಡಲಾಗಿಸಿ ದೇವಪ್ಪ ರೋದಿಸುತ್ತಿದ್ದ. ಅವನ ಕನ್ನಡಕದೊಳಗೆ ಉದುರುವ ಕಣ್ಣ ಹನಿಯು ಸ್ಪಷ್ಟವಾಗಿ ಕಾಣಬಹುದಿತ್ತು. ನೆರೆದಿದ್ದ ಕೆಲವರು ಸಾಂತ್ವನ ಹೇಳುತ್ತಿದ್ದರು. ಕೊನೆಗೆ ಬೆಂಕಿ ನಂದಿತು.

'ತಂಬಾಕು ಸುಡುತ್ತದೆ' ಎಂದು ಬರೆದ ಬೋರ್ಡೊಂದು ಅರ್ಧಸುಟ್ಟು ಬೆಂಕಿಯ ಭೀಕರತೆಯನ್ನು ಹೇಳಿಕೊಳ್ಳುತ್ತಿತ್ತು. ಜನ್ನತ್‌ಗೆ ತವರು ಮನೆ ಕರಟಿಹೋದ ಅನುಭವ. ಅಲ್ಲಿ ಸೇದಿದ ಸಿಗರೇಟಿನ ನೆನಪು ಮಾಸದಂತೆ ಇನ್ನೂ ಮನಸ್ಸಿನೊಳಗೆ ಅಚ್ಚೊತ್ತಿತ್ತು. ಆ ಹೊಸ ಹುರುಪು ಮೂಡಿಸಿದ ಅನೂಹ್ಯ ನಿಮಿಷಗಳು, ದಟ್ಟ ಹೊಗೆ ತುಂಬಿದ ಆ ಕತ್ತಲ ಕೋಣೆ ಹಾಗೆಯೇ ಹಸಿ ಹಸಿಯಾಗಿ ನೆನಪಿಗೆ ಬಂದು ವಿಷಾದದ ಹೊಗೆ ಅಲ್ಲೆಲ್ಲ ದಟ್ಟವಾಗಿ ಆವರಿಸಿತು. ಜನ್ನತ್ ನೆರೆದಿದ್ದವರೆಲ್ಲರ ಕಣ್ಣುಗಳನ್ನೊಮ್ಮೆ ದಿಟ್ಟಿಸಿದ, ಎಲ್ಲರೂ ಸಮಾನ ದುಃಖಿಗಳಾದ ಸಿಗರೇಟಿನ ಗಿರಾಕಿಗಳು. ಅಬ್ಬಾ... ಮೂಲೆಯಲ್ಲಿ ಅವಳೂ ನಿಂತಿದ್ದಾಳೆ. ಅಷ್ಟೂ ಗಂಡಸರ ಪಕ್ಕ ಒಬ್ಬಳೇ ಬುರ್ಖಾಧಾರಿ ಹೆಣ್ಣು. ಅಲ್ಲಿ ಹೆಚ್ಚು ಹೊತ್ತು ನಿಲ್ಲಲಾಗದೆ ಸುಟ್ಟ ಅಂಗಡಿಯ ಫೋಟೊವೊಂದನ್ನು ಕ್ಲಿಕ್ಕಿಸಿಕೊಂಡ ಜನ್ನತ್ ನಡೆಯುತ್ತಾ ಕಡಲ ತಡಿಗೆ ಬಂದ. ಅಲೆಗಳು ಯಾವ ಬೇಸರವನ್ನೂ ತೋರಿಸದೆ ತೀರವನ್ನು ಮುತ್ತಿಕ್ಕಿ ಬರ್ಬರವಾಗಿ ಆಟವಾಡುವಂತಿದ್ದವು. ಸಿಗರೇಟೊಂದನ್ನು ಹಚ್ಚಿ ತುಟಿಗಿಟ್ಟ. ಅದು ಸಪ್ಪೆ ಸಪ್ಪೆಯಾದಂತನಿಸಿತು. ಆಗಷ್ಟೇ ತಲೆ ಮಾತ್ರ ಸುಟ್ಟಿದ್ದ ಆ ಸಿಗರೇಟನ್ನು ನೆಲಕ್ಕೊಗೆದು ಮೊಬೈಲೆತ್ತಿಕೊಂಡ. ಸುಟ್ಟು ಶವವಾದ ಅಂಗಡಿಯ ಫೋಟೊವನ್ನು ತನ್ನ ಫೇಸ್ಬುಕ್ ವಾಲ್ಗೆ ಅಂಟಿಸಿಕೊಂಡ, ಮೇಲೊಂದು ತಲೆ ಬರಹ, 'ಬದುಕು ತಂಬಾಕಿನಂತೆ, ಮುಗಿದು ಹೋಗುವುದು ನಿಮಿಷದಲ್ಲೇ- ಸೇದುವವರ ಸ್ವರ್ಗಕ್ಕೆ ಬೆಂಕಿ ಬಿದ್ದಿದೆ'.

ಹಾಗೆಯೇ ಫೋನ್ ಎತ್ತಿಟ್ಟ. ನಿರಾಳನಾಗಿ ಕಡಲನ್ನೇ ದಿಟ್ಟಿಸತೊಡಗಿದ. ಐದು ನಿಮಿಷ